# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ-ವಾದಿ ಪರ ವಕೀಲರಾದ ಶ್ರೀ. ಎಸ್ ಆರ್ ರವರಿಂದ

ನಿಮ್ಮ ತಂದೆಯ ಹೆಸರೇನು ಎಂದರೆ ಗುರುಚೆನ್ನಬಸಪ್ಪ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಚೆನ್ನಾಗಿ ಮಾತನಾಡುತ್ತಾರೆ ಮತ್ತು ಅರೋಗ್ಯದಿಂದ ಇರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಅನಾರೋಗ್ಯದಿಂದ ಇರುತ್ತಾರೆ ಎಂದು ತೋರಿಸುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎನ್ನುವ ಕಾರಣಕ್ಕೆ ನಿಮಗೆ ಎಸ್ ಪಿ ಎ ನೀಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಈ ದಾವಾವನ್ನು ಯಾವಾ ಕಾರಣಕ್ಕೆ ಸಲ್ಲಿಸಿದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಗೊತ್ತು ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಸಲ್ಲಿಸಿದ್ದಾರೆ ಎಂದರೆ ವಾದಿಗೆ ಭಾಗಂಶ ಬರಬೇಕು ಎಂದು ಈ ದಾವಾ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಯಾವ ಸ.ನಂಬರ್ ಆಸ್ತಿಯ ಮೇಲೆ ಈ ದಾವಾ ಸಲ್ಲಿಸಿದ್ದಾರೆ ಎಂದರೆ ಸ.ನಂ.73/1 ರ 1 ಎಕರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಚಕ್ಕುಬಂದಿ ಏನು ಎಂದರೆ ಪೂರ್ವಕ್ಕೆ –ಸಂಗನಬಸಪ್ಪ ರವರ ಜಮೀನು, ಪಶ್ಚಿಮಕ್ಕೆ –ಸಂಗಪ್ಪ ರವರ ಜಮೀನು, ಉತ್ತರಕ್ಕೆ – ಗುರುಸಿದ್ದಪ್ಪ ರವರ ಜಮೀನು, ದಕ್ಷಿಣಕ್ಕೆ –ಸಿದ್ದರಾಮಕ್ಕ ರವರ ಜಮೀನು ಎಂದು ನುಡಿಯುತ್ತಾರೆ.

ಪೂರ್ವಕ್ಕೆ ಇರುವ ಸಂಗಬಸಪ್ಪ ರವರನ್ನು ಸಂಗಬಸವಯ್ಯ ಎಂದು ಕೂಡ ಕರೆಯುತ್ತಾರೆ ಎಂದರೆ ಸರಿ. ಈ ಮೇಲ್ಕಂಡ ಚಕ್ಕುಬಂದಿಯ ಆಸ್ತಿಗೆ ವಾದಿಯು ವಿಭಾಗ ಕೋರಿ ಈ ದಾವಾ ಸಲ್ಲಿಸಿದ್ದಾರೆ ಎಂದರೆ ಸರಿ. ವಾದಿಯ ತಂದೆಯ ಹೆಸರೇನು ಎಂದರೆ ದೊಡ್ಡಬಸಪ್ಪ ಎಂದು ನುಡಿಯುತ್ತಾರೆ. ದೊಡ್ಡಬಸಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಒಟ್ಟು 6 ಜನ ಎಂದು ನುಡಿಯುತ್ತಾರೆ. ಅವರುಗಳೆಂದರೆ ಶಿವಗಂಗಾ, ಲೀಲಾವತಿ, ಗಿರಿಜಮ್ಮ, ಪಂಕಜಾ, ಸುಜಾತ, ಪ್ರೇಮಾ ಎಂದು ನುಡಿಯುತ್ತಾರೆ. ದೊಡ್ಡಬಸಪ್ಪರವರು ಈಗ ಜೀವಂತ ಇರುವುದಿಲ್ಲ ಎಂದರೆ ಸರಿ. ದೊಡ್ಡಬಸಪ್ಪ ರವರ ಹೆಂಡತಿಯ ಹೆಸರು ಲಲಿತಮ್ಮ ಎಂದರೆ ಸರಿ. ವಾದಿ, 1 ರಿಂದ 6 ನೇ ಪ್ರತಿವಾದಿಯರು ದೊಡ್ಡಬಸಪ್ಪ ರವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ವಾದಿಯನ್ನು ಬೆಣಚಗೆರೆಗೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ವಾದಿ, 1 ರಿಂದ 6 ನೇ ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ವಾಸಾವಾಗಿದ್ದಾರೆ ಎಂದರೆ ಸರಿಯಲ್ಲ. ಮದುವೆಗಿಂತ ಮುಂಚಿತವಾಗಿ ವಾದಿಯು ಒಟ್ಟು ಕುಟುಂಬದಲ್ಲಿಯೇ ವಾಸವಾಗಿದ್ದರು ಎಂದರೆ ಸರಿ. ವಾದಿಯ ತಂದೆ ತೀರಿಕೊಂಡ ನಂತರ ವಾದಿಯನ್ನು ಬೆಣಚಗೆರೆಗೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದರಿಂದ ವಾದಿಯೇ ಒಟ್ಟು ಕುಟುಂಬದ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯು ಒಟ್ಟು ಕುಟುಂಬದಲ್ಲಿ ಇದ್ದಾಗಲೇ ಕೆಲವೊಂದು ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರ ಜಮೀನನ್ನು ನಾವು ತೆಗೆದುಕೊಂಡ ನಂತರ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಇನ್ನು 2 ಭಾಗ ಮತ್ತು ಮನೆಯೂ ಕೂಡ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ವಾದಿ, 2 ರಿಂದ 6 ನೇ ಪ್ರತಿವಾದಿಯರು 1 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಮೂಲಕ ನೀಡಿದ್ದಾರೆ ಎಂದರೆ ಸರಿಯಲ್ಲ. ಲಲಿತಮ್ಮ ರವರು ಸದರಿ ಮನೆಯನ್ನು ಅನುಭವಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಯರಿಗೆ ದಾವಾ ಅನುಸೂಚಿ ಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಸ.ನಂ.316/3 ರಲ್ಲಿ 1 ಎಕರೆ 39 ವರೆ ಗುಂಟೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ, ಸ.ನಂ.13/2 ರಲ್ಲಿ 2 ಎಕರೆ 1 ಗುಂಟೆ ಯನ್ನು ದೊಡ್ಡಬಸಪ್ಪ ರವರ ತಮ್ಮನಾದ ಸಂಗಪ್ಪ ಮತ್ತು ದೊಡ್ಡಬಸಪ್ಪ ರವರು ನಾವು ಜಮೀನನ್ನು ತೆಗೆದುಕೊಂಡ ನಂತರ ಅದಲು ಬದಲು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಖಾತೆ ಪ್ರತಿವಾದಿಗಳ ಹೆಸರಿನಲ್ಲಿ ಇದೆ ಎಂದು ತೋರಿಸುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ನಿಮ್ಮ ತಂದೆ ಏನು ಬರೆಸಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಗೊತ್ತು ಎಂದು ನುಡಿಯುತ್ತಾರೆ. ವಾದಿಯ ತಂದೆಗೆ ಇನ್ನೆರಡು ಆಸ್ತಿಗಳು ಇವೆ ಎನ್ನುವ ವಿಚಾರವನ್ನು ನಿಮ್ಮ ತಂದೆಯ ಪ್ರತಿವಾದ ಪತ್ರದಲ್ಲಿ ಬರೆಸಿದ್ದಾರಾ ಎಂದರೆ ಸಾಕ್ಷಿಯು ಬರೆಸಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ನಿಮ್ಮ ತಂದೆ ಯಾವುದೇ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಕನ್ನಡ ಓದಲು ಬರುತ್ತದಾ ಎಂದರೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ.39 ರ ಆರ್ ಟಿ ಸಿ ಯನ್ನು ತೋರಿಸಿ ಸದರಿ ಆರ್ ಟಿ ಸಿ ಯಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರದ ಮೂಲಕ ಬಂದಿರುತ್ತದೆ ಎಂದು ನಮೂದಾಗಿರತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಮಗೆ ಜಮೀನನ್ನು ಮಾರಾಟ ಮಾಡಿದ ನಂತರ ಸದರಿ ದಾನ ಪತ್ರವನ್ನು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾನ ಪತ್ರವನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ನಿಡಿ.28 ರಂತೆ ಬರೆದಿದ್ದಾರೆ ಎಂದರೆ ಸರಿ. ಅದೇ ರೀತಿ ಮನೆಯನ್ನು ಕೂಡ ವಾದಿಯು ತನ್ನ ತಾಯಿಯ ಹೆಸರಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಅನುಸೂಚಿ ಸ್ವತ್ತನ್ನು ಹೊರುತಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಕ್ರಯ ಪತ್ರವನ್ನು ನೀಡಿ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರೇಮಾ ಮತ್ತು ಅವರ ಗಂಡ ಸಿದ್ದಲಿಂಗಮರಿ ರವರೇ ಜಮೀನನ್ನು ಮಾಡಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಗಂಡನೇ

ದಾವಾ ಅನುಸೂಚಿ ಸ್ವತ್ತನ್ನು ನಿಮಗೆ ಬರೆಸಿಕೊಟ್ಟಿದ್ದಾರೆ ಎನ್ನುವ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಸರಿಯಲ್ಲ. ದಿಃ 26.11.2007 ರ ಕ್ರಯ ಪತ್ರದಲ್ಲಿ ವಾದಿಯ ಸಹಿಯನ್ನು ಪಡೆದಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ಸಹಿಯನ್ನು ಪಡೆಯದೇ ಇರುವ ಕಾರಣಕ್ಕೆ ಸದರಿ ಕ್ರಯ ಪತ್ರವು ವಾದಿಯ ಹಕ್ಕನ್ನು ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ 2 ರಿಂದ 6 ನೇ ಪ್ರತಿವಾದಿಯರ ಜೊತೆ ಶಾಮೀಲಾಗಿ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

2. ವಾದಿಯ ಮದುವೆ ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿಯು ನಾವು ಜಮೀನನ್ನು ಕೊಂಡುಕೊಳ್ಳುವ ಮೊದಲೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ದೊಡ್ಡಬಸಪ್ಪ ರವರಿಗೆ ಸಾಕಷ್ಟು ಜಮೀನು ಇತ್ತು ಎಂದರೆ ಸರಿಯಲ್ಲ. ವಾದಿಯ ಮನೆಯಲ್ಲಿ ಬಂದ ಆದಾಯದಿಂದ ವಾದಿಯ ಮದುವೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮಗೆ ಜಮೀನನ್ನು ಮಾರಾಟ ಮಾಡಿ ನಂತರ ವಾದಿಯ ಮದುವೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ವಾದಿಗೆ ಸೇರಿದ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಮತ್ತು ವಾದಿಗೆ ಭಾಗ ನೀಡಬಾರದು ಎನ್ನುವ ಕಾರಣಕ್ಕೆ ನೀವು ಸುಳ್ಳು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸಲ್ಲಿಸಿರುವ ಬೇರೆ ದಾಖಲಾತಿಗಳು ವಾದಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಓ. ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.